# ‘ಮನಸ್ಸಿನ ತಲ್ಲಣ ತಡೆಯಲು ಭಕ್ತಿಯೊಂದೇ ಉಪಾಯ’



ಶಿರಸಿ: ಮನುಷ್ಯನ ಮನಸ್ಸಿನ ತಲ್ಲಣಗಳ ಮುಕ್ತಿಗೆ ದೇವರ ಮೇಲೆ ಭಕ್ತಿ ತೋರುವುದು ಉತ್ತಮ ಉಪಾಯವಾಗಿದೆ ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಚಾತುರ್ಮಾಸ್ಯ ಅವಧಿಯಲ್ಲಿ ಅವರು ಸ್ವರ್ಣವಲ್ಲೀ ಮಠದಲ್ಲಿ ಶುಕ್ರವಾರ ಗುಂದ ಮತ್ತು ಭಾಪಖಂಡ ಭಾಗಿಯ ಶಿಷ್ಯ ಭಕ್ತರು ಸಲ್ಲಿಸಿದ ಗುರು ಸೇವೆ ಸ್ವೀಕರಿಸಿ ಆಶೀರ್ವದಿಸಿದರು.

ತಲ್ಲಣಗೊಂಡ ವ್ಯಕ್ತಿ ಇನ್ನೊಬ್ಬರ ಸಹಾಯ ಇಲ್ಲದೇ ನಾವೇ ಸಮಾಧಾನ ಪಡಿಸಿಕೊಳ್ಳಲು ಸಾಧ್ಯ ಇರುವದು ದೇವರ ನಾಮ ಸ್ಮರಣೆಯಿಂದ. ಭಗವಂತನ ಮೇಲಿನ ಭಕ್ತಿಯಿಂದ ಮಾತ್ರ ಇದು ಸಾಧ್ಯವಿದೆ. ಭಕ್ತಿ ಪೂರ್ವಕ ಸ್ಮರಣೆಯಿಂದ ಸಿಗುವ ಮನಃಶಾಂತಿ ಬೇರೆ ಯಾವುದೇ ಮೂಲದಿಂದ ಸಿಗುವುದಿಲ್ಲ. ಇಷ್ಟ ದೇವರ ಸ್ಮರಣೆ ಮಾಡುವುದನ್ನು ರೂಢಿ ಇಟ್ಟುಕೊಳ್ಳಬೇಕು ಎಂದರು.

ಈ ವೇಳೆ ಗುಂದ ಸೀಮಾ ಅಧ್ಯಕ್ಷ ದತ್ತಾತ್ರೇಯ ಹೆಗಡೆ ತಮ್ಮಣಗಿ, ಭಾಪಖಂಡ ಭಾಗಿ ಅಧ್ಯಕ್ಷ ಶಿವಾನಂದ ಭಟ್ಟ, ರಾಮಕೃಷ್ಣ ಭಟ್ಟ ನಗರಿ, ದಿವಾಕರ ದೇಸಾಯಿ ಶೇವಾಳ್ಳಿ ಇದ್ದರು.